# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 399(449),

ಸದಸ್ಯರ ಹೆಸರು : ಶ್ರೀ ಶಿವಕುಮಾರ್.ಕೆ (ನಾಮನಿರ್ದೇಶನ ಹೊಂದಿದವರು)

ಉತ್ತರಿಸಬೇಕಾದ ದಿನಾಂಕ : 19.08.2026

ಉತ್ತರಿಸುವ ಸಚಿವರು : ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು .

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೇಂದ್ರ ಸರ್ಕಾರವು ಕಾನೂನು ಮಾಪನಶಾಸ್ತ್ರ ಇಲಾಖೆಯಲ್ಲಿ GATC (Government Approved Test Centres) ಎಂಬ ಹೆಸರಿನಡಿ ಸರ್ಕಾರದ ಅಧಿಕಾರಿಗಳು ಪರೀಕ್ಷಿಸುತ್ತಿದ್ದ ತೂಕದ ಸಾಧನಗಳನ್ನು (ಪೆಟ್ರೋಲ್ ಪಂಪುಗಳು ಸೇರಿ) ಖಾಸಗೀಕರಣ ಮಾಡುತ್ತಿರುವುದರಿಂದ ಗ್ರಾಹಕರಿಗೆ ಆಗುವ ನಷ್ಟ ಮತ್ತು ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಆಗುವ ನಷ್ಟ ಎಷ್ಟು: (ವಿವರ ಒದಗಿಸುವುದು). | ಕೇಂದ್ರ ಸರ್ಕಾರವು ಜಾರಿಗೆ ತಂದಿರುವ GATC ನಿಯಮಗಳನ್ನು ಕರ್ನಾಟಕ ರಾಜ್ಯದಲ್ಲಿ ಜಾರಿಗೆ ತರುವ ನಿಟ್ಟಿನಲ್ಲಿ ಇಲಾಖೆಯು ಕರ್ನಾಟಕ ರಾಜ್ಯ GATC ನಿಯಮಗಳನ್ನು ರಚಿಸುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. |
| ಆ) | ಕಾನೂನು ಮಾಪನ ಶಾಸ್ತ್ರ ಇಲಾಖೆಯಲ್ಲಿ ಇರುವ ಒಟ್ಟು ಹುದ್ದೆಗಳು ಮತ್ತು ಖಾಲಿ ಹುದ್ದೆಗಳು ಎಷ್ಟು: | ಮಾಹಿತಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ. |
| ಇ) | ಗ್ರಾಹಕರ ಹಿತದೃಷ್ಟಿಯಿಂದ ಪೆಟ್ರೋಲ್ ಪಂಪುಗಳ ಪರಿಶೀಲನೆ ಪ್ರತಿ ವರ್ಷಕ್ಕೊಮ್ಮೆ ಹಿಂದೆ ಇದ್ದು ಈಗ ಎರಡು ವರ್ಷಕ್ಕೊಮ್ಮೆ ಮಾಡಿರುವುದರಿಂದ ಒಂದು ವರ್ಷದ ಶುಲ್ಕ ಸರ್ಕಾರದ ಬೊಕ್ಕಸಕ್ಕೆ ನಷ್ಟವಲ್ಲವೇ ಮತ್ತು ಗ್ರಾಹಕರಿಗೆ ಮೋಸ ಆಗುವುದಿಲ್ಲವೇ: | ಕಾನೂನು ಮಾಪನಶಾಸ್ತ್ರ ಇಲಾಖೆಯು ಪೆಟ್ರೋಲ್ ಪಂಪುಗಳ ಪರಿಶೀಲನೆಯನ್ನು ಕೇಂದ್ರ ಸರ್ಕಾರದ ಗ್ರಾಹಕ ವ್ಯವಹಾರಗಳು, ಆಹಾರ ಮತ್ತು ನಾಗರಿಕ ಸರಬರಾಜು ಸಚಿವಾಲಯದ ಅಧಿಸೂಚನೆ ದಿನಾಂಕ:18-12-2025 ರಂದು ಹೊರಡಿಸಿದ ಅಧಿಸೂಚನೆಯಲ್ಲಿ Legal Metrology (General) Rules 2011 ನಿಯಮ 27 (2) (a) ಗೆ ತಿದ್ದುಪಡಿ ತರುವ ಮೂಲಕ 24 ತಿಂಗಳಿಗೊಮ್ಮೆ ಪೆಟ್ರೋಲ್ ಮತ್ತು ಡೀಸೆಲ್ ಪಂಪುಗಳ ಸತ್ಯಾಪನೆ ಮತ್ತು ಮುದ್ರೆ ಮಾಡಲು ಆದೇಶಿಸಿರುತ್ತದೆ.<br><br>ದ್ವೈವಾರ್ಷಿಕ ಸತ್ಯಾಪನೆ ಮತ್ತು ಮುದ್ರೆ ಪ್ರಕ್ರಿಯೆಗೆ ಮಾತ್ರ ಅವಕಾಶವಿದ್ದರೂ ಸಹ ಇಲಾಖೆಯ ಅಧಿಕಾರಿಗಳು ಪೆಟ್ರೋಲ್ ಮತ್ತು ಡೀಸೆಲ್ ಬಂಕ್‌ಗಳ ಅನಿರೀಕ್ಷಿತ |

| | | |
|---|---|---|
| | | ಹಾಗೂ ನಿಯತಕಾಲಿಕವಾಗಿ ತಪಾಸಣೆ ನಡೆಸುವುದರಿಂದ ಗ್ರಾಹಕರಿಗೆ ಇಂಧನ ವಿತರಣೆಯಲ್ಲಾಗಬಹುದಾದ ಮೋಸವನ್ನು ಪರಿಣಾಮಕಾರಿಯಾಗಿ ತಡೆಗಟ್ಟಬಹುದಾಗಿದೆ. |
| ಈ) | ಕಾನೂನು ಮಾಪನ ಶಾಸ್ತ್ರ ಇಲಾಖೆ ಮರು ಸಂಘಟನೆಯಾಗಿ ಎರಡು ವರ್ಷಗಳಾಗಿದ್ದು, ಮರು ಸಂಘಟನೆಯ ಉದ್ದೇಶ ಈಡೇರಿದೆಯೇ: ಇಲಾಖೆಯ ಮರು ಸಂಘಟನೆಯಾದ ನಂತರ ಎಲ್ಲಾ ಹಂತದಲ್ಲಿನ ಅಧಿಕಾರಿ / ನೌಕರರಿಗೆ ಸಿಗಬೇಕಾದ ಬಡ್ತಿ ಸವಲತ್ತುಗಳು ದೊರೆತಿವೆ. ಇಲ್ಲವಾದರೆ ಅದಕ್ಕೆ ಕಾರಣಗಳೇನು: ಅದನ್ನು ಸರಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು | ಕಾನೂನು ಮಾಪನಶಾಸ್ತ್ರ ಇಲಾಖೆಯ ಮರುಸಂಘಟನೆ ಆದೇಶವು ದಿನಾಂಕ:19-09-2024 ರಿಂದ ಜಾರಿಗೆ ಬಂದಿದ್ದು, ಸದರಿ ದಿನಾಂಕದ ನಂತರ ಈ ಕೆಳಗಿನಂತೆ ಹಲವಾರು ವೃಂದದ ಅಧಿಕಾರಿ /ನೌಕರರಿಗೆ ಮುಂಬಡ್ತಿ ನೀಡಲಾಗಿದೆ.<br><br>ಉಪನಿಯಂತ್ರಕರ ಹುದ್ದೆಯಿಂದ ಜಂಟಿ ನಿಯಂತ್ರಕರ ಹುದ್ದೆಗೆ-4 ಹುದ್ದೆಗಳಿಗೆ<br>ಸಹಾಯಕ ನಿಯಂತ್ರಕರು ಗ್ರೇಡ್-2 ವೃಂದದಿಂದ ಸಹಾಯಕ ನಿಯಂತ್ರಕರು ಗ್ರೇಡ್-1 ವೃಂದಕ್ಕೆ- 16 ಹುದ್ದೆಗಳಿಗೆ.<br>ಕಾನೂನು ಮಾಪನಶಾಸ್ತ್ರ ನಿರೀಕ್ಷಕರ ವೃಂದದಿಂದ ಸಹಾಯಕ ನಿಯಂತ್ರಕರು ಗ್ರೇಡ್-2 ವೃಂದಕ್ಕೆ-24 ಹುದ್ದೆಗಳಿಗೆ.<br>ಪ್ರಥಮ ದರ್ಜೆ ಸಹಾಯಕರ ವೃಂದದಿಂದ ಕಾನೂನು ಮಾಪನಶಾಸ್ತ್ರ ನಿರೀಕ್ಷಕರ ವೃಂದಕ್ಕೆ-2 ಹುದ್ದೆಗಳಿಗೆ.<br>ತಾಂತ್ರಿಕ ಸಹಾಯಕರ ವೃಂದದಿಂದ ಹಿರಿಯ ತಾಂತ್ರಿಕ ಸಹಾಯಕರ ವೃಂದಕ್ಕೆ-28 ಹುದ್ದೆಗಳಿಗೆ ಮುಂಬಡ್ತಿ ನೀಡಲಾಗಿರುತ್ತದೆ.<br><br>ಇಲಾಖಾ ಮರು ಸಂಘಟನೆಯಲ್ಲಿ ಸಹಾಯಕ ನಿಯಂತ್ರಕರು ಗ್ರೇಡ್-1 ಹೊಸ ಹುದ್ದೆಯನ್ನು ಸೃಜನೆ ಮಾಡಿದ್ದರಿಂದ ಸದರಿ ಹುದ್ದೆಯಿಂದ ಉಪನಿಯಂತ್ರಕರ ಹುದ್ದೆಗೆ ಮುಂಬಡ್ತಿ ನೀಡಲು ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಕನಿಷ್ಠ ಅರ್ಹತದಾಯಕ ಸೇವೆಯನ್ನು 5 ವರ್ಷಗಳಿಗೆ ನಿಗದಿಪಡಿಸಿರುವುದರಿಂದ ಸದರಿ ಉಪನಿಯಂತ್ರಕರ ಹುದ್ದೆಗಳಿಗೆ ಮುಂಬಡ್ತಿ ನೀಡಲು ಸಾಧ್ಯವಾಗಿರುವುದಿಲ್ಲ. ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಸೂಕ್ತ ತಿದ್ದುಪಡಿ ಮೂಲಕ ಅರ್ಹ ಅಧಿಕಾರಿಗಳಿಗೆ / ಸಿಬ್ಬಂದಿಗಳಿಗೆ ಮುಂಬಡ್ತಿ ನೀಡಲು ಕ್ರಮವಹಿಸುವಂತೆ ಕೋರಿ ಪ್ರಸ್ತಾವನೆ / ಮನವಿ ಸ್ವೀಕೃತವಾಗಿದ್ದು ಪರಿಶೀಲನೆಯಲ್ಲಿರುತ್ತದೆ. |
| ಉ) | ಉನ್ನತ ಹಂತದ ಹುದ್ದೆಗಳು ಎರಡು ವರ್ಷಗಳಿಂದ ಖಾಲಿ ಇದ್ದು ಭರ್ತಿ ಮಾಡಲು ಸರ್ಕಾರ ಯಾವ ಕ್ರಮವಹಿಸಿದೆ ? | |

| | | |
|---|---|---|
| | | ಪ್ರಥಮ ದರ್ಜೆ ಸಹಾಯಕರು ಹಾಗೂ ಹಿರಿಯ ತಾಂತ್ರಿಕ ಸಹಾಯಕರ ವೃಂದದಿಂದ ಕಾನೂನು ಮಾಪನಶಾಸ್ತ್ರ ನಿರೀಕ್ಷಕರ ಹುದ್ದೆಗೆ ಮುಂಬಡ್ತಿ ನೀಡಲು ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಮಾಡುವ ಪ್ರಕ್ರಿಯೆಯು ಚಾಲ್ತಿಯಲ್ಲಿರುತ್ತದೆ. |

ಸಂಖ್ಯೆ : ಆನಾಸ 90 ಕಾಮಾಸೇ 2026 (ಇ-ಆಫೀಸ್)

**( ರಿಜ್ವಾನ್ ಅರ್ಷದ್ )**

ಆಹಾರ, ನಾಗರಿಕ ಸರಬರಾಜು, ಗ್ರಾಹಕರ
ವ್ಯವಹಾರಗಳ ಸಚಿವರು.

<u>ಅನುಬಂಧ-1</u>

| ಕ್ರ. ಸಂ | ಅಧಿಕಾರಿ/ನೌಕರರ ದರ್ಜೆ | ಹುದ್ದೆಯ ಪದನಾಮ | ಒಟ್ಟು ಮಂಜೂರಾದ ಹುದ್ದೆಗಳು | ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರರ ಸಂಖ್ಯೆ | ಖಾಲಿ ಇರುವ ಹುದ್ದೆಗಳ ಸಂಖ್ಯೆ |
|---|---|---|---|---|---|
| 1 | 2 | 3 | 4 | 5 | 6 |
| 1 | ಗ್ರೂಪ್ ಎ | ನಿಯಂತ್ರಕರು | 1 | 1 | - |
| | | ಜಂಟಿ ನಿಯಂತ್ರಕರು | 4 | 4 | - |
| | | ಉಪ ನಿಯಂತ್ರಕರು | 8 | - | 8 |
| | | ಸಹಾಯಕ ನಿಯಂತ್ರಕರು ಗ್ರೇಡ್-1. | 16 | 16 | - |
| 2 | ಗ್ರೂಪ್ ಬಿ | ಸಹಾಯಕ ನಿಯಂತ್ರಕರು ಗ್ರೇಡ್-2. | 34 | 23 | 11 |
| | | ಪತ್ರಾಂಕಿತ ವ್ಯವಸ್ಥಾಪಕರು | 01 | 01 | - |
| 3 | ಗ್ರೂಪ್ ಸಿ | ನಿರೀಕ್ಷಕರು | 107 | 43 | 64 |
| | | ಅಧೀಕ್ಷಕರು | 04 | 02 | 2 |
| | | ಶೀಘ್ರಲಿಪಿಕಾರರು | 05 | 01 | 4 |
| | | ಪ್ರಥಮ ದರ್ಜೆ ಸಹಾಯಕರು | 34 | 22 | 12 |
| | | ದ್ವಿತೀಯ ದರ್ಜೆ ಸಹಾಯಕರು | 45 | 09 | 36 |
| | | ಬೆರಳಚ್ಚುಗಾರರು | 10 | 06 | 04 |
| | | ಹಿರಿಯ ತಾಂತ್ರಿಕ ಸಹಾಯಕರು | 40 | 28 | 12 |
| | | ತಾಂತ್ರಿಕ ಸಹಾಯಕರು | 85 | 10 | 75 |
| | | ವಾಹನ ಚಾಲಕರು | 06 | 04 | 02 |
| 4 | ಗ್ರೂಪ್ ಡಿ | ಗ್ರೂಪ್ ಡಿ | 50 | 15 | 35 |
| | | ಒಟ್ಟು | 450 | 185 | 265 |

ಜಂಟಿ ನಿಯಂತ್ರಕರು (ಆಡಳಿತ)
ಕಾನೂನ ಮಾಪನಶಾಸ್ತ್ರ ಇಲಾಖೆ